ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ನ್ಯಾಯಾಲಯ , ಹೊನ್ನಾಳಿ.
ಸಿ.ಸಿ. 464 / 2016

ಪಿಡಬ್ಯೂಃ 1

ದಿಃ 20-12-2019

ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸ ಸ ಅ ರವರಿಂದಃ-

ಸಾಕ್ಷಿಗೆ ಒಂದುದಾಖಲೆಯನ್ನು ತೋರಿಸಲಾಗಿದ್ದು ಸದರಿ ದಾಖಲೆಯು ಸ್ಥಳ ಮಹಜರ್ ಎಂದು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು . ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 4 ಎ ಎಂದು ಗುರುತಿಸಲಾಯಿತು . ಸದರಿ ಸಹಿಯನ್ನು ನಾನು ದಿ ಃ 17-01-2016 ರಂದು ನನ್ನ ಕಣದಲ್ಲಿ ಅಡಿಕೆ ಕಳ್ಳತನ ಆದ ವಿಚಾರದಲ್ಲಿ ಸಿ ಪಿ ಐ ರಮೇಶ್ ರವರ ಸಮಕ್ಷಮ ಬೆಳಗ್ಗೆ 10 ರಿಂದ 11 ಗಂಟೆ ವರೆಗೂ ನಡೆದ ಪಂಚನಾಮೆ ಸಮಯದಲ್ಲಿ ಸಹಿ ಮಾಡಿರುತ್ತೇನೆ . ಸದರಿ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿರುತ್ತೇನೆ ಆಗ ನನ್ನ ಜೊತೆ ಸ್ಥಳದಲ್ಲಿ ಚಾಸಾ 2 ಮತ್ತು 3 ರವರು ಹಾಜರಿದ್ದರು . ಮತ್ತು ನನ್ನನ್ನು ದಿ ಃ17-01-2016 ರಂದು ಪೊಲೀಸರು ಠಾಣೆಗೆ ಕರೆಯಿಸಿದ್ದರು . ಆಗ ಆರೋಪಿತರು ಕಳ್ಳತನ ಮಾಡಿರುವ ವಿಚಾರ ತಿಳಿದು ಬಂದಿರುತ್ತದೆ . ಠಾಣೆಯಲ್ಲಿ ನಾನು ಅರುಣಾ , ಧರ್ಮ , ಪತಿನಾಯ್ಕ , ಇಸ್ ಮಯ್ ಮತ್ತು ಮಂಜುನಾಯ್ಕ ರವರನ್ನು ನಾನು ನೋಡಿರುತ್ತೇನೆ . ಸದರಿಯವರು ತನ್ನ ಕಣದಲ್ಲಿನ ಅಡಿಕೆಯನ್ನು ಕಳ್ಳತನ ಮಾಡಿರುತ್ತಾರೆ ಎಂದು ನನಗೆ ತಿಳಿಸಿದ್ದರು . ಠಾಣೆಯಿಂದ ಆರೋಪಿತರನ್ನು ನನ್ನ ಕಣಕ್ಕೆ ಕರೆದುಕೊಂಡು ಬಂದರು . ಕಳ್ಳತನ ಮಾಡಿರುವ ಜಾಗವನ್ನು ಆರೋಪಿತರು ಪೊಲೀಸರಿಗೆ ತೋರಿಸಿರುತ್ತಾರೆ . ಸಾಕ್ಷಿಗೆ ನಿಪಿ 2 ಮತ್ತು 3 ಭಾವಚಿತ್ರದಲ್ಲಿ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. 8 ಚೀಲ ಅಡಿಕೆ ಕಳ್ಳತನ್ನ ಆಗಿದ್ದು ಅದು 75 ಕೆ ಜಿಯ 7 ಚೀಲ ಗಳು 33 ಕೆ ಜಿಯ 1 ಚೀಲವನ್ನು ಆರೋಪಿತರಿಂದ ಅಮಾನತ್ತು ಪಡಿಸಲಾಯಿತು . ಸದರಿ ಮಾಲುಗಳನ್ನು ನಾನು ದಿಃ 29-01-2016 ರಂದು ನ್ಯಾಯಾಲಯದ ಆದೇಶದ ಮೇರೆಗೆ ಠಾಣೆಯಿಂದ ಬಿಡಿಸಿಕೊಂಡಿರುತ್ತೇನೆ , ಮಹಜರ್ ಗೆ ಸಹಿ ಮಾಡಿರುತ್ತೇನೆ . ಮಹಜರ್ ನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 5 ಎಂದು ಗುರುತಿಸಲಾಯಿತು . ಅದರಲ್ಲಿನ ತನ್ನ ಸಹಿಯನ್ನು ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ 5 ಎ ಎಂದು ಗುರುತಿಸಲಾಯಿತು . ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ . ಉಳಿದ ಆರೋಪಿತರಾದ 1 , 4 ಮತ್ತು 5 ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಎಂದರು . 1, 4 ಮತ್ತು 5 ನೇ ಆರೋಪಿತರನ್ನು ಗುರುತಿಸುವ ಸಲುವಾಗಿ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು .

ಮುಂದುವರೆದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ  ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ಹೊನ್ನಾಳಿ.